ಇ) ಬಂದಿದ್ದಲ್ಲಿ, ಯಾವ ಪರ್ಯಾಯ ವ್ಯವಸ್ಥೆಯನ್ನು ಮಾಡಲಾಗಿದೆ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) ರಾಜ್ಯದಲ್ಲಿ ಆಡಳಿತಾತ್ಮಕ ಸುಧಾರಣೆ ಕೈಗೊಳ್ಳಲು ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

1) ಆಡಳಿತ ಸುಧಾರಣೆ ತರುವ ಬಗ್ಗೆ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಶ್ರೀ ಹಾರನಹಳ್ಳಿ ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ಆಡಳಿತ ಸುಧಾರಣೆ ಆಯೋಗವನ್ನು ರಚಿಸಲಾಗಿದೆ.

2) ಹಲವು ಇಲಾಖೆಗಳಲ್ಲಿ ಟಾಸ್ಕ್ ಫೋರ್ಸ್‌ಗಳನ್ನು ರಚಿಸಿದೆ.

3) ಆಡಳಿತ ಕಾರ್ಯತಂತ್ರ ಮತ್ತು ಕ್ರಿಯಾ ಯೋಜನೆಯನ್ನು ರೂಪಿಸಲಾಗಿದೆ.

4) ಮಾಹಿತಿ ಹಕ್ಕು ಅಧಿನಿಯಮ ರೂಪಿಸಲಾಗಿದೆ.

5) ವಿದ್ಯುನ್ಮಾನ ಆಡಳಿತ ಕಾರ್ಯಯೋಜನೆ ರೂಪಿಸಲಾಗುತ್ತಿದೆ.

6) ಪಾರದರ್ಶಕ ಅಧಿನಿಯಮ ಜಾರಿಗೆ ತರುವುದು.

7) ಭ್ರಷ್ಟಾಚಾರ ನಿರ್ಮೂಲನ ಉನ್ನತ ಮಟ್ಟದ ಸಮಿತಿ ರಚಿಸಿದೆ.

8) ವೃಂದ ನಿಯಂತ್ರಣ ಪ್ರಾಧಿಕಾರಕ್ಕೆ ಅಧಿಕಾರ ನೀಡುವ ವರ್ಗಾವಣೆ ರೀತಿ ರಚಿಸಿದೆ.

9) ಸಾರ್ವಜನಿಕರಿಗೆ ಬೇಕಾದ ಅಗತ್ಯತೆಗಳನ್ನು ತ್ವರಿತವಾಗಿ ನೀಡುವ ಉದ್ದೇಶದಿಂದ ಕಾನೂನು ನಿಯಮಗಳನ್ನು ಸರಳಗೊಳಿಸಲು, ತಿದ್ದುಪಡಿ ಮಾಡಲು ಹಾಗೂ ವಿಧಾನ ಸರಳೀಕರಣ ಕುರಿತು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಆ) ಹೌದು, ಮುಚ್ಚುವುದರಿಂದ ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಲಾಗುವುದು.

ಇ) ಪರ್ಯಾಯ ವ್ಯವಸ್ಥೆ ಪರಿಶೀಲನೆಯಲ್ಲಿದೆ.

ಬೈಲಹೊಂಗಲ ನಗರದಲ್ಲಿ ಕಟ್ಟುತ್ತಿರುವ ವಿದ್ಯುತ್ ಸ್ಟೇಶನ್ ಕಾಮಗಾರಿ

1611 (1893) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ನಗರದಲ್ಲಿ ಕಟ್ಟುತ್ತಿರುವ 110. ಕೆ.ವಿ. ಸ್ಟೇಷನ್ನಿನ ಕೆಲಸ ಮಂದಗತಿಯಲ್ಲಿ ನಡೆಯುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ.

ಆ) ಹಾಗಿದ್ದಲ್ಲಿ, ಈ ಕೆಲಸವನ್ನು ಇನ್ನು ಎಷ್ಟು ದಿನಗಳೊಳಗಾಗಿ ಮಾಡಿ ಮುಗಿಸಲಾಗುವುದು.

ಇ) ಬೈಲಹೊಂಗಲ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಸವದತ್ತಿ ತಾಲ್ಲೂಕಿನ ಮುರಗೋಡ ಗ್ರಾಮದ 33 ಕೆ.ವಿ. ಸ್ಟೇಷನ್ನಿನ ಕೆಲಸ ಮುಗಿದಿದ್ದರೂ ಸಹ ಈವರೆಗೂ ಅಲ್ಲಿಂದ ವಿದ್ಯುತ್ ಕೊಡದೇ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ.

ಈ) ಹಾಗಿದ್ದಲ್ಲಿ, ಇನ್ನು ಎಷ್ಟು ದಿನಗಳಲ್ಲಿ ವಿದ್ಯುತ್ ಕೊಡಲಾಗುವುದು?

ಶ್ರೀ ಬಸವರಾಜ್ ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಬೆಳಗಾವಿ ಜಿಲ್ಲೆ ಬೈಲಹೊಂಗದಲ್ಲಿ ಕಟ್ಟುತ್ತಿರುವ 110 ಕೆ.ವಿ. ಸ್ಟೇಷನ್ ಕೆಲಸವು ತ್ವರಿತಗತಿಯಲ್ಲಿ ನಡೆಯುತ್ತಿದ್ದು, ಈ ವರ್ಷದ ಅಂತ್ಯದೊಳಗೆ ಮುಗಿಸುವ ನಿರೀಕ್ಷೆ ಇದೆ.

ಇ) ಸವದತ್ತಿ ತಾಲ್ಲೂಕಿನ ಮುರಗೋಡ ಗ್ರಾಮದ 33 ಕೆ.ವಿ. ಸ್ಟೇಷನ್ ಕೆಲಸವು ಪೂರ್ಣಗೊಂಡಿದ್ದು, ಪ್ರಿ

ಈ) ಕಮಿಷನ್ ಟೆಸ್ಟ್ ಕೆಲಸಗಳನ್ನು ಮಾಡಲಾಗುತ್ತಿದೆ. ಆಗಸ್ಟ್ - 2002ರ ವೇಳೆಗೆ ಇದನ್ನು ಸ್ಥಾಪಿಸುವ ನಿರೀಕ್ಷೆ ಇದೆ.

ರಾಜ್ಯದಲ್ಲಿ ಸಣ್ಣ ಉಳಿತಾಯ ಪತ್ರವನ್ನು ಖರೀದಿಸುವುದು

1613 (1949) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ (ತುರವೇಕೆರೆ) : ಮಾನ್ಯ ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ ಹಾಗೂ ವಿಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ರಾಜ್ಯದಲ್ಲಿ ಎಲ್ಲಾ ಕಛೇರಿಗಳಲ್ಲಿ ಬೇರೆ ಬೇರೆ ಕೆಲಸಗಳಿಗೆ ಹೋದಾಗ ಅಲ್ಲಿನ ಅಧಿಕಾರಿಗಳು ಸಣ್ಣ ಉಳಿತಾಯ ಪತ್ರಗಳನ್ನು ತೆಗೆದುಕೊಂಡರೆ ಮಾತ್ರ ಕೆಲಸ ಮಾಡಿಕೊಡುವುದಾಗಿ ಬೆದರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

2) ಈ ರೀತಿ ಆದೇಶವನ್ನು ಸರ್ಕಾರ ಎಂದಿನಿಂದ ಜಾರಿ ಮಾಡಿದೆ.

3) ಸಣ್ಣ ಪುಟ್ಟ ಕೆಲಸಗಳಿಗೆ ಅನೇಕ ಬಾರಿ ಕಛೇರಿಗೆ ಹೋದಾಗ ಇದರ ಬೆದರಿಕೆಯಿಂದ ಕೆಲಸಗಳು ಕುಂಟಿತವಾಗಿರುವುದು ನಿಜವೆ,

4) ಈ ಆದೇಶವನ್ನು ತೆಗೆಯಲಾಗುವುದೆ.

5) ಹಾಗಿದ್ದಲ್ಲಿ, ಎಂದಿನಿಂದ ಜಾರಿ ಮಾಡಲಾಗುವುದು?

ಶ್ರೀ ಬಾಬುರಾವ್ ಬಸವಣ್ಣ ಚಿಂಚನೂರ್ (ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ ಹಾಗೂ ವಿಮೆ ರಾಜ್ಯ ಸಚಿವರು) :

1) ಇಲ್ಲ

2) ಉದ್ಭವಿಸುವುದಿಲ್ಲ

3) ಉದ್ಭವಿಸುವುದಿಲ್ಲ.

4) ಉದ್ಭವಿಸುವುದಿಲ್ಲ.

5) ಉದ್ಭವಿಸುವುದಿಲ್ಲ.

ತುರುವೇಕೆರೆಗೆ ಅಗ್ನಿಶಾಮಕ ಠಾಣೆ ಮಂಜೂರು

1615 (1952) ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ತುರುವೇಕೆರೆ) : ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೇಕೆರೆಗೆ ಈಗಾಗಲೇ ಅಗ್ನಿಶಾಮಕ ಠಾಣೆ ಕೊಡಲು ಕೇಳಿದ್ದು ನಿಜವೇ;

ಆ) ಸರ್ಕಾರವು ಆದೇಶ ಮಾಡಿದ್ದರೂ ಅಧಿಕಾರಿಗಳು ತಾತ್ಸಾರ ಮಾಡಲು ಕಾರಣವೇನು;

ಇ) 40 ಕಿಲೋಮೀಟರ್ ವ್ಯಾಪ್ತಿಗೆ ಒಳಪಟ್ಟು ಅಗ್ನಿಶಾಮಕ ಠಾಣೆ ಒದಗಿಸಲು ಇರುವ ನಿಯಮದ ಪ್ರಕಾರ ತಿಪಟೂರು, ಅರಸೀಕೆರೆ ಕೇವಲ 24 ಕಿಲೋಮೀಟರ್ ಇದ್ದು ಇಲ್ಲಿಗೆ ಕಾನೂನು ರೀತಿ ಈ ಠಾಣೆಯನ್ನು ಮಂಜೂರು ಮಾಡಲು ಬರುವುದಿಲ್ಲವೆ;

ಈ) 40 ಕಿಲೋಮೀಟರ್ ಒದಗಿರುವ ಅನೇಕ ತಾಲ್ಲೂಕುಗಳಿಗೆ ಈ ಠಾಣೆಯನ್ನು ಕೊಟ್ಟಿಲ್ಲವೇ;

ಉ) ಬೆಂಕಿಯ ಅನಾಹುತ, ಘಟನೆಗಳು ಜಾಸ್ತಿ ಇರುವುದರಿಂದ ತಕ್ಷಣ ತುರುವೇಕೆರೆಗೆ ಠಾಣೆಯನ್ನು ಕೊಡಲಾಗುವುದೇ ಕೊಡುವುದಾದಲ್ಲಿ ಎಂದು ಮಂಜೂರು ಮಾಡಲಾಗುವುದು?